# ಬ್ರದರ್ ಹುಡ್

ಭಾರತೀಯ ಸಂವಿಧಾನವು ಭಾರತದ ನಿವಾಸಿಗಳೆಲ್ಲರನ್ನೂ ಸೋದರರೆಂದು ಪರಿಭಾವಿಸುತ್ತದೆ. ಅದರ ಪೀಠಿಕೆಯ ಆಶಯವು ಅದೇ ಆಗಿದೆ. ಒಂದು ಆದರ್ಶ ಗಣರಾಜ್ಯದ ಕನಸು ಅದು. ಆ ಬಗೆಯ ಕನಸು ಕಾಣಲು ಇರುವ ಮುಖ್ಯ ಪ್ರೇರಣೆ ಏನೆಂದರೆ ಅದು ನಿರೀಕ್ಷಿಸುವ ಸೋದರತ್ವ ಆ ನಾಡಿನಲ್ಲಿ ಇಲ್ಲದಿರುವುದೇ ಆಗಿದೆ. ಇಲ್ಲದಿರುವ ಭಾವನೆಯನ್ನು, ಅನುಭೂತಿಯನ್ನು ಆದರ್ಶದ ನೆಲೆಯಲ್ಲಿ ಪ್ರಚಾರ ಮಾಡುವುದು ಮತ್ತು ಕಾನೂನಾತ್ಮಕವಾದ ಬಂಧಗಳ ಮೂಲಕ ಅದನ್ನು ಜನರ ಬದುಕಿನಲ್ಲಿ ಚಾಲ್ತಿಗೆ ತರುವುದು ಗಣರಾಜ್ಯದ ಉದ್ದೇಶವೂ, ಜವಾಬ್ದಾರಿಯೂ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ ಭಾರತೀಯ ಸಂವಿಧಾನ ಕೆಲಸ ಮಾಡಿದೆ. ಆದರೆ ಅದರ ಈ ಘನ ಉದ್ದೇಶ, ಆಶಯ ಎಷ್ಟರ ಮಟ್ಟಿಗೆ ಜನ ಬದುಕಿನಲ್ಲಿ ಕೆಲಸ ಮಾಡಿದೆಯೆಂಬುದು ಚರ್ಚಾಸ್ಪದ ವಿಷಯ. ಜಾತಿ– ಜಾತಿಗಳ ನಡುವೆ, ಮತ–ಮತಗಳ ನಡುವೆ, ನಿರ್ಮಾಣವಾಗಿರುವ ಅಂತರವಿರಲಿ; ರಕ್ತ ಸಂಬಂಧಗಳಲ್ಲೇ ಭಾವನಾತ್ಮಕ ಬೆಸುಗೆ ಸಡಿಲವಾಗುತ್ತಿರುವ ವಾತಾವರಣ ಕಂಡುಬರುತ್ತಿರುವುದು ವಾಸ್ತವಿಕ ಸಂಗತಿ.

ಸಾಮಾನ್ಯಾರ್ಥದಲ್ಲಿ 'ಬ್ರದರ್‌ಹುಡ್' ಅಥವಾ 'ಸಿಸ್ಟರ್‌ಹುಡ್' ಎಂದರೆ ಸೋದರಿಕೆ ಸಂಬಂಧ; ಭ್ರಾತೃತ್ವ. ನೇರ ರಕ್ತ ಸಂಬಂಧದ ಮೂಲಕ ಜನಿಸಿದ ಅಣ್ಣ ತಮ್ಮಂದಿರು ಅಥವಾ ಅಕ್ಕ ತಂಗಿಯರ ಸಂಬಂಧ ಮತ್ತು ಒಡನಾಟದ ಮುಂದುವರಿಕೆಯನ್ನು ಅದು ಸೂಚಿಸುತ್ತದೆ. ಆದರೆ ಇಂದು ಈ ಪದಗಳ ಅರ್ಥ ಅಷ್ಟಕ್ಕೆ ಸೀಮಿತವಾಗದೆ, ವಿಸ್ತಾರಗೊಂಡಿದೆ. ಪರಸ್ಪರ ಸಹಾಯಕ್ಕೆಂದು ಕಟ್ಟಿಕೊಂಡ ಕೂಟಗಳು, ಸಹಕಾರ ಸಂಘಗಳು, ಮಂಡಳಿಗಳು ಈ ವ್ಯಾಪ್ತಿಯಲ್ಲಿ ತಮ್ಮನ್ನು ಸೇರಿಸಿಕೊಳ್ಳಲು ಬಯಸುತ್ತವೆ. ಆದರೆ ಇವುಗಳು ವ್ಯವಹಾರಿಕ ಅರ್ಥದಲ್ಲಿ ಒಗ್ಗೂಡಿದ ಸಂಸ್ಥೆಗಳು. ಇವುಗಳ ಅಂತರಂಗದಲ್ಲಿ ಒಂದು ಸೈದ್ಧಾಂತಿಕ ಸತ್ವವಿರುವುದಿಲ್ಲ. ಇವು ಲೌಕಿಕ ಭಿನ್ನತೆಯಲ್ಲಿ ವಿಘಟನೆಯಾಗುವ ಸಾಧ್ಯತೆಯಿರುತ್ತದೆ. ಆದರೆ 'ಬ್ರದರ್ ಹುಡ್' ಅಥವಾ 'ಸಿಸ್ಟರ್ ಹುಡ್'ನಲ್ಲಿ ವಿಘಟನೆಯಾಗುವ ಸಂಭವವೇ ಉದ್ಭವಿಸುವುದಿಲ್ಲ. ಏಕೆಂದರೆ ಈ ಸಂಬಂಧಗಳು ರಕ್ತ ಸಂಬಂಧ ಅಥವಾ ಲೌಕಿಕಾರ್ಥದ ಸಂಬಂಧಗಳಾಚೆಗಿನ ಸೈದ್ಧಾಂತಿಕ ನಂಬಿಕೆ ಮತ್ತು ಬದ್ಧತೆಯ ಮೇಲೆ ಬೆಸೆದುಕೊಂಡಿರುತ್ತವೆ. ಇಲ್ಲಿ ವ್ಯಾಪ್ತಿ ಮುಖ್ಯವಾಗುವುದೇ ಇಲ್ಲ. ಬಹುಪಾಲು ಭಾವನಾತ್ಮಕ ಸಂಬಂಧಗಳು ಕೂಡ ಮುಖ್ಯವಾಗುವುದೂ ಇಲ್ಲ. ಸಿದ್ಧಾಂತ ಮತ್ತು ಸೋದರಿಕೆಗೆ ದ್ರೋಹ ಬಗೆದವರನ್ನು ನಿರ್ದಾಕ್ಷಿಣ್ಯತೆಯಿಂದ ಇಲ್ಲವಾಗಿಸುವ ಹಂತಕ್ಕೂ ಅದು ಬೆಳೆದಿರುತ್ತದೆ.

ಈ ಬ್ರದರ್ ಹುಡ್, ಸಿಸ್ಟರ್ ಹುಡ್‌ಗಳು ಸಿದ್ಧಾಂತದ ಆಧಾರದ ಮೇಲೆ ಪರಸ್ಪರ ಹತ್ತಿರವಾಗುವ, ಆ ಮೂಲಕ ತಾವು ನಂಬಿದ ಸಿದ್ಧಾಂತವನ್ನು ಆಚರಿಸುವ, ಪ್ರಚಾರ ಮಾಡುವ ಮತ್ತು ಅದರ ವಿರುದ್ಧವಿರುವವರನ್ನು ನಾಶ ಮಾಡುವ ಬದ್ಧತೆಯನ್ನು ಹೊಂದಿರುತ್ತದೆ. ಇಂದು ಜಗತ್ತಿನಲ್ಲಿ ಆಳುತ್ತಿರುವ ಎಲ್ಲ ಮತ– ಧರ್ಮಗಳು, ರಾಜಕೀಯ ಸಿದ್ಧಾಂತಗಳು, ಸ್ತ್ರೀ ವಾದಿ ಸಿದ್ಧಾಂತಗಳು– ಇವುಗಳನ್ನು ಬಹಿರಂಗವಾಗಿ ಅಥವಾ ಗುಪ್ತವಾಗಿ ವಿರೋಧಿಸುತ್ತಿರುವ ಸೈದ್ಧಾಂತಿಕ ಸಂಘಟನೆಗಳು ಮೂಲತಃ ಇಂಥ ಬ್ರದರ್ ಹುಡ್, ಸಿಸ್ಟರ್ ಹುಡ್‌ಗಳ ಕಲ್ಪನೆಯ ಕೂಸುಗಳೇ ಆಗಿವೆ.

ಇಂದು ತಮ್ಮ ಅಗಾಧವಾದ ಮತೀಯ ಶಕ್ತಿಗಳಿಂದ ಜಗತ್ತನ್ನು ಆಳುತ್ತಿರುವ ಮತಗಳು ಅಥವಾ ಸರ್ವಾಧಿಕಾರಿಗಳು ಸದಾ ವಿರೋಧವನ್ನು ಎದುರಿಸುತ್ತಿರುತ್ತವೆ. ಬೃಹತ್ ದೇಹವನ್ನು ಹೊತ್ತ ಆನೆ ತನ್ನ ಕಿವಿಯಲ್ಲಿ ಸೇರಿಕೊಂಡ ಒಂದು ಸಣ್ಣ ಇರುವೆಯ ಕಡಿತಕ್ಕೆ ಹೆದರಿ ನಡುಗುವಂತೆ ಈ ಅಗಾಧ ಶಕ್ತಿಗಳು ಅತ್ಯಂತ ಬೆರಳೆಣಿಕೆಯ ಸದಸ್ಯ ಸಂಖ್ಯೆಯಲ್ಲಿರುವ ಇಂಥ ಬ್ರದರ್ ಹುಡ್, ಸಿಸ್ಟರ್ ಹುಡ್‌ಗಳಿಗೆ ಹೆದರುತ್ತವೆ. ಏಕೆಂದರೆ ಇಂಥ ಭಿನ್ನ ನಂಬಿಕೆಯ ಸಣ್ಣ ಬೀಜಗಳಿಂದಲೇ ಭವಿಷ್ಯದಲ್ಲಿ ಅತ್ಯಂತ ದೊಡ್ಡ ಆಘಾತಗಳು ಮೂಡುತ್ತವೆಂಬ ಸತ್ಯ ಗೊತ್ತಿರುತ್ತದೆ. ಇಂಥ ಬ್ರದರ್ ಹುಡ್, ಸಿಸ್ಟರ್ ಹುಡ್ ಗಳನ್ನು 'ರಹಸ್ಯ ಸಮಾಜಗಳು' ಅಥವಾ 'ನಿಗೂಢ ಸಮಾಜಗಳು' ಎಂದು ಕರೆಯುತ್ತಾರೆ. ವ್ಯವಸ್ಥೆಯ ಕರಾಳ ಬೃಹತ್ ಶಕ್ತಿಯ ವಿರುದ್ಧ ತಮ್ಮ ಹೋರಾಟವನ್ನು ಜೀವಂತವಾಗಿರಿಸಿಕೊಳ್ಳುವ ಉದ್ದೇಶದಿಂದ ತಮ್ಮ ಕೂಟಗಳನ್ನು ಚಲನಶೀಲವಾಗಿಡಲು ಈ ಗೋಪ್ಯತೆಯನ್ನು ಕಾಪಾಡಿಕೊಳ್ಳುವುದು ಅನಿವಾರ್ಯವಾಗುತ್ತದೆ.

ಚರಿತ್ರೆಯಲ್ಲಿ ಸುಪ್ರಸಿದ್ಧರಾದ ಮೈಕೆಲ್ ಎಂಜೆಲೋ, ಲಿಯನಾರ್ಡೊ ಡಾವಿಂಚಿ, ನ್ಯೂಟನ್ ಮೊದಲಾದವರು ಇಂಥ ರಹಸ್ಯ ಸಮಾಜಗಳ ಸದಸ್ಯರಾಗಿದ್ದರು ಎಂಬ ಸತ್ಯ ನಮಗೆ ಕುತೂಹಲ ಮೂಡಿಸುತ್ತದೆ.

■ **ಶಿಕಾಕು**

## ಮಾತೇ ಮುತ್ತು

★ ಪರಿಶುದ್ಧ ಹೃದಯವಿಲ್ಲದ ಗಂಡಾಗಲೀ ಹೆಣ್ಣಾಗಲೀ ಪರಮಾತ್ಮನ ಸಾನಿಧ್ಯ ಹೊಂದಲು ಅರ್ಹರಲ್ಲ.

–ಮಹಾತ್ಮ ಗಾಂಧೀಜಿ

★ ನಾಳೆಯೇ ಜಗತ್ತಿಗೆ ಪ್ರಳಯ ಎಂದು ಗೊತ್ತಾಗಿ, ಮನುಷ್ಯ ತನ್ನ ಎಲ್ಲ ಆಸೆ ಆಕಾಂಕ್ಷೆಗಳನ್ನು ತೊರೆದು ಹತಾಶನಾದರೂ, ಭೂಮಿಯಲ್ಲಿ ಒಂದು ಸಸ್ಯವನ್ನು ನೆಡಬೇಕು.

–ಮಹಮ್ಮದ್ ಪೈಗಂಬರ್

★ ನಿಸ್ವಾರ್ಥ ಪ್ರೇಮ ನಿಮಗೆ ಉಲ್ಲಾಸವನ್ನು ಉತ್ತೇಜನವನ್ನು ಕೊಡುತ್ತದೆ. ವಿಶ್ವಾಸ ಗಳಿಸದ ಬದುಕು ವ್ಯರ್ಥ.

–ಆನಂದಕಂದ

★ ಸ್ವಾರ್ಥವನ್ನು ಗೆದ್ದವನು, ಶಾಂತಿಯನ್ನು ಪಡೆದವನು ಮತ್ತು ಸತ್ಯವನ್ನು ತಿಳಿದವನು ನಿಜಕ್ಕೂ ಸುಖಿ.

–ಗೌತಮ ಬುದ್ಧ

★ ಭಕ್ತಿಯಲ್ಲಿ ಬೇಡಿಕೆ ಇಲ್ಲ; ಅರ್ಪಣೆ ಇದೆ.

–ರವೀಂದ್ರನಾಥ ಠಾಕೂರ್

★ ಸಂತೋಷವನ್ನು ಮತ್ತೊಬ್ಬರಲ್ಲಿ ಹಂಚಿಕೊಂಡರೆ ಅದು ಇಮ್ಮಡಿಯಾಗುತ್ತದೆ.

–ಡೆನ್ಮಾರ್ಕ್ ಗಾದೆ

★ ನಾಳೆ ಎಂಬುವುದು ನಿನ್ನಿನ ಮನಸು, ಮುಂದೆ ಎಂಬುವುದು ಇಂದಿನ ಕನಸು.

–ದ.ರಾ.ಬೇಂದ್ರೆ

★ ಹೊಟ್ಟೆಗೆ ಕಿವಿ ಇಲ್ಲವಾದ್ದರಿಂದ ಹಸಿದವರ ಮುಂದೆ ಭಾಷಣ ಮಾಡುವುದು ವ್ಯರ್ಥ.

–ಪ್ಲೂ ಟಾರ್ಕ್

★ ಭಾಷಾಂತರ ಕೀಳು ಕೆಲಸವಲ್ಲ, ಸುಲಭವಾದ ಕೆಲಸವೂ ಅಲ್ಲ, ನಿರರ್ಥಕವಾದ ಕೆಲಸವೂ ಅಲ್ಲ.

–ಬಿ.ಎಂ.ಶ್ರೀ

★ ಕೃತಯುಗದಲ್ಲಿ ತಪಸ್ಸು ಶ್ರೇಷ್ಠ, ತ್ರೇತಾಯುಗದಲ್ಲಿ ಜ್ಞಾನ ಶ್ರೇಷ್ಠ, ದ್ವಾಪರದಲ್ಲಿ ಯಜ್ಞ, ಕಲಿಯುಗದಲ್ಲಿ ದಾನವೇ ಶ್ರೇಷ್ಠ.

–ಪರಾಶರ ಸ್ಮೃತಿ

★ ಸೌದೆಗಳನ್ನು ಸ್ವಲ್ಪ ಅಲುಗಾಡಿಸಿದರೆ ಬೆಂಕಿಯು ಚೆನ್ನಾಗಿ ಉರಿಯುತ್ತದೆ. ತುಳಿದರೆ ಅಥವಾ ಹೆದರಿಸಿದರೆ ಹಾವು ಹೆಡೆಯನ್ನು ಬಿಚ್ಚುತ್ತದೆ. ಪ್ರಾಣಿ ಅಥವಾ ಮನುಷ್ಯನು ಸಿಟ್ಟು ಬಂದಾಗ ತನ್ನ ಶಕ್ತಿಯನ್ನು ತೋರಿಸುತ್ತಾನೆ.

–ಕಾಳಿದಾಸ

★ ಮಹಾತ್ಮರ ಜತೆ ಸೇರಿದರೆ ಪಾಪಗಳು ನಾಶವಾಗುತ್ತವೆ. ಮನಸ್ಸಿಗೆ ಶಾಂತಿಯುಂಟಾಗುತ್ತದೆ. ಒಂದೇ ಸಲ ಮಾತನಾಡಿದರೂ ಈ ಲೋಕದಲ್ಲಿ ಪರಲೋಕದಲ್ಲಿ ಒಳ್ಳೆಯದಾಗುತ್ತದೆ.

–ಮಹಾವೀರ ಚರಿತ

★ ಆಸೆಯೊಂದರಿಂದ ಬಿಡಲ್ಪಟ್ಟರೆ ಬಡವನಾರು? ಒಡೆಯನಾರು? ಅದು ಹರಡಲು ಅವಕಾಶ ಕೊಟ್ಟದ್ದೇ ಅದರ ದಾಸ್ಯ ತಲೆಗೆ ಕಟ್ಟಿದಂತೆ ಆಗಿದೆ.

–ಹಿತೋಪದೇಶ

★ ಇನ್ನೇನು ಮತ್ತೇನು ಗತಿಯೆಂದು ಬೆದರದಿರು ನಿನ್ನ ಕೈಯೊಳಗಿಹುದೆ ವಿಧಿಯ ಲೆಕ್ಕಣಿಕೆ?

–ಡಿ.ವಿ.ಜಿ.